# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 296 |
| ಸದಸ್ಯರ ಹೆಸರು | | ಶ್ರೀ ಐವನ್ ಡಿ' ಸೋಜಾ |
| ಉತ್ತರಿಸಬೇಕಾದ ದಿನಾಂಕ | | 12.07.2018 |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಪ್ರಶ್ನೆ | | ಉತ್ತರ |
| ಅ) | ಕರ್ನಾಟಕ ರಾಜ್ಯದಲ್ಲಿ ಒಟ್ಟು ಅತಿಥಿ ಉಪನ್ಯಾಸಕರ ಸಂಖ್ಯೆ ಎಷ್ಟು; ಅವರಿಗೆ ನೀಡುತ್ತಿರುವ ವಾರ್ಷಿಕ ಸಂಬಳ ಎಷ್ಟು; ಬೇಡಿಕೆ ಎಷ್ಟು; (ವಿವರ ನೀಡುವುದು) | ಸರ್ಕಾರದ ದಿನಾಂಕ:02/07/2018 ರ ಪತ್ರದಲ್ಲಿ 2018-19ನೇ ಶೈಕ್ಷಣಿಕ ಸಾಲಿಗೆ ಕಾರ್ಯಭಾರಕ್ಕನುಗುಣವಾಗಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ. ಅದರಂತೆ, 2018-19ನೇ ಶೈಕ್ಷಣಿಕ ಸಾಲಿಗೆ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದೆ.<br><br>ಅತಿಥಿ ಉಪನ್ಯಾಸಕರಿಗೆ ಅವರ ವಿದ್ಯಾರ್ಹತೆಯ ಆಧಾರದ ಮೇಲೆ ರೂ.13,000 (ಯುಜಿಸಿ ನಿಗಧಿಪಡಿಸಿರುವ ವಿದ್ಯಾರ್ಹತೆ) ಹಾಗೂ ರೂ.11,000 (ಯುಜಿಸಿ ನಿಗಧಿಪಡಿಸಿರುವ ವಿದ್ಯಾರ್ಹತೆ ಹೊಂದದೆ ಇರುವವರಿಗೆ) ಮಾಸಿಕ ಗೌರವಧನ ನೀಡಲಾಗುತ್ತದೆ. ಅತಿಥಿ ಉಪನ್ಯಾಸಕರು ಅವರಿಗೆ ನೀಡುತ್ತಿರುವ ಮಾಸಿಕ ಗೌರವಧನವನ್ನು ರೂ.25,000 ಕ್ಕೆ ಹೆಚ್ಚಿಸಬೇಕೆಂದು ಸರ್ಕಾರಕ್ಕೆ ಬೇಡಿಕೆಯನ್ನು ಸಲ್ಲಿಸುತ್ತಿದ್ದಾರೆ. |
| ಆ) | ಅತಿಥಿ ಉಪನ್ಯಾಸಕರನ್ನು ಪ್ರತಿವರ್ಷ ನೇಮಿಸಲಾಗುವುದೇ; ನಿಗಧಿತ ಸಮಯದಲ್ಲಿ ಉಪನ್ಯಾಸಕರ ನೇಮಕವಾಗದೆ ವಿದ್ಯಾರ್ಥಿಗಳಿಗೆ/ ಅನಾನುಕೂಲ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ವಿವರ ನೀಡುವುದು) | ಪ್ರತಿ ವರ್ಷ ವಿದ್ಯಾರ್ಥಿಗಳ ಪ್ರವೇಶಾತಿ ಪೂರ್ಣಗೊಂಡ ನಂತರ ಖಾಯಂ ಉಪನ್ಯಾಸಕರಿಗೆ ಬೋಧನಾ ಕಾರ್ಯಭಾರ ಹಂಚಿಕೆ ಮಾಡಿದ ನಂತರ ಉಳಿಯುವ ಹೆಚ್ಚುವರಿ ಬೋಧನಾ ಕಾರ್ಯಭಾರವನ್ನು ನಿರ್ವಹಿಸುವ ಅವಶ್ಯಕತೆಯನ್ನು ಪರಿಗಣಿಸಿ ಅತಿಥಿ ಉಪನ್ಯಾಸಕರನ್ನು ನೇಮಿಸಲಾಗುತ್ತದೆ. ಅವಶ್ಯಕತೆಗನುಗುಣವಾಗಿ ಅತಿಥಿ ಉಪನ್ಯಾಸಕರನ್ನು ಆಯ್ಕೆ ಮಾಡಿಕೊಳ್ಳುವವರೆಗೆ ವಿದ್ಯಾರ್ಥಿಗಳಿಗೆ ಅನಾನುಕೂಲವಾಗಬಾರದೆಂಬ ದೃಷ್ಟಿಯಿಂದ ಖಾಯಂ ಉಪನ್ಯಾಸಕರು ಕಾರ್ಯಭಾರವನ್ನು ನಿರ್ವಹಿಸುತ್ತಾರೆ. |
| ಇ) | ಅತಿಥಿ ಉಪನ್ಯಾಸಕರನ್ನು ಖಾಯಂಗೊಳಿಸಲು ಸರ್ಕಾರದ ಮುಂದೆ ಪ್ರಸ್ತಾವನೆ ಇದೆಯೇ; ರಾಜ್ಯದಲ್ಲಿ ಖಾಲಿಯಾಗಿರುವ ಉಪನ್ಯಾಸಕರ ಸಂಖ್ಯೆ ಎಷ್ಟು (ವಿವರ ನೀಡುವುದು) | ಇಲ್ಲ.<br><br>ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರಸ್ತುತ ಖಾಲಿ ಇರುವ ಉಪನ್ಯಾಸಕರ ಹುದ್ದೆಗಳ ಸಂಖ್ಯೆ: 859<br>(ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ) |
| ಈ) | ಅತಿಥಿ ಉಪನ್ಯಾಸಕರನ್ನು ಪ್ರತಿ ವರ್ಷ ಪುನರ್ ನೇಮಕಾತಿ ಮಾಡುವುದರಿಂದ ವಿಳಂಬವಾಗುವುದನ್ನು ತಪ್ಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? | ವಿದ್ಯಾರ್ಥಿಗಳ ಪ್ರವೇಶಾತಿಯ ವಿವರಗಳು ಮತ್ತು ಖಾಯಂ ಉಪನ್ಯಾಸಕರಿಗೆ ಹಂಚಿಕೆ ಮಾಡಿದ ನಂತರ ಉಳಿಯುವ ಕಾರ್ಯಭಾರದ ವಿವರಗಳು ಲಭ್ಯವಾಗುತ್ತಿದ್ದಂತೆ ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ ಇವರಿಗೆ ಅವಶ್ಯಕತೆಗನುಗುಣವಾಗಿ ಅತಿಥಿ ಉಪನ್ಯಾಸಕರನ್ನು ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗುತ್ತಿರುವುದರಿಂದ ಈ ಪ್ರಕ್ರಿಯೆಯಲ್ಲಿ ಗಣನೀಯ ವಿಳಂಬವಾಗುತ್ತಿಲ್ಲ. |

(ಜಿ.ಟಿ.ದೇವೇಗೌಡ)
ಉನ್ನತ ಶಿಕ್ಷಣ ಸಚಿವರು

ಇಡಿ 49 ಯುಜಿಹೆಚ್ 2018

ಅನುಬಂಧ

ಕರ್ನಾಟಕ ಸರ್ಕಾರ

ಕಾಲೇಜು ಶಿಕ್ಷಣ ಇಲಾಖೆ

ವಿಷಯವಾರು ಖಾಲಿ ಇರುವ ಹುದ್ದೆಗಳ ವಿವರ (ದಿನಾಂಕ:01-07-2018ರಲ್ಲಿದ್ದಂತೆ)

| ಕ್ರ.ಸಂ | ವಿಷಯ | ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ | ಹಾಲಿ ಕರ್ತವ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸಂಖ್ಯೆ | ಒಟ್ಟು ಖಾಲಿ ಹುದ್ದೆಗಳು |
|---|---|---|---|---|
| 1 | 2 | 3 | 4 | 5 |
| 1 | ಕನ್ನಡ | 837 | 778 | 59 |
| 2 | ಇಂಗ್ಲೀಷ್ | 653 | 569 | 84 |
| 3 | ಹಿಂದಿ | 73 | 55 | 18 |
| 4 | ಸಂಸ್ಕೃತ | 23 | 9 | 14 |
| 5 | ತಮಿಳು | 4 | 1 | 3 |
| 6 | ತೆಲುಗು | 7 | 0 | 7 |
| 7 | ಮರಾಠಿ | 1 | 0 | 1 |
| 8 | ಉರ್ದು | 44 | 28 | 16 |
| 9 | ಅರೇಬಿಕ್ | 2 | 0 | 2 |
| 10 | ಸಂಗೀತ | 5 | 0 | 5 |
| 11 | ಇತಿಹಾಸ | 583 | 544 | 39 |
| 12 | ಅರ್ಥಶಾಸ್ತ್ರ | 646 | 599 | 47 |
| 13 | ರಾಜ್ಯಶಾಸ್ತ್ರ | 530 | 487 | 43 |
| 14 | ಸಮಾಜಶಾಸ್ತ್ರ | 394 | 364 | 30 |
| 15 | ಗ್ರಾಮೀಣಾಭಿವೃದ್ಧಿ | 1 | 0 | 1 |
| 16 | ಸಹಕಾರ | 2 | 1 | 1 |
| 17 | ಶಿಕ್ಷಣ | 3 | 1 | 2 |
| 18 | ಭೂಗೋಳಶಾಸ್ತ್ರ | 59 | 55 | 4 |
| 19 | ತತ್ವಶಾಸ್ತ್ರ | 4 | 2 | 2 |
| 20 | ಮನಃಶಾಸ್ತ್ರ | 88 | 65 | 23 |
| 21 | ಅಪರಾಧ ಶಾಸ್ತ್ರ | 6 | 3 | 3 |
| 22 | ಫೋರೆನ್ಸಿಕ್ ಸೈನ್ಸ್ | 2 | 2 | 0 |
| 23 | ವಾಣಿಜ್ಯಶಾಸ್ತ್ರ | 1445 | 1344 | 101 |
| 24 | ಪತ್ರಿಕೋದ್ಯಮ | 15 | 14 | 1 |
| 25 | ಕಾನೂನು | 39 | 26 | 13 |
| 26 | ಮಾಸ್ಟರ್ ಆಫ್ ಇಂಟರ್‌ನ್ಯಾಷನಲ್ ಬಿಸಿನೆಸ್ | 5 | 2 | 3 |
| 27 | ಮಾಸ್ಟರ್ ಆಪ್ ಸೋಶಿಯಲ್ ವರ್ಕ್ (ಎಂಎಸ್‌ಡಬ್ಲ್ಯೂ/ಬಿಎಸ್‌ಡಬ್ಲ್ಯೂ) | 63 | 60 | 3 |
| 28 | ಮಾಸ್ಟರ್ ಆಪ್ ಫೈನಾಶಿಯಲ್ ಅಕೌಂಟಿಂಗ್ | 2 | 0 | 2 |

| ಕ್ರ.ಸಂ | ವಿಷಯ | ಮಂಜೂರಾಗಿರುವ ಒಟ್ಟು ಹುದ್ದೆಗಳ ಸಂಖ್ಯೆ | ಹಾಲಿ ಕರ್ತವ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ಸಂಖ್ಯೆ | ಒಟ್ಟು ಖಾಲಿ ಹುದ್ದೆಗಳು |
|---|---|---|---|---|
| 29 | ಮಾಸ್ಟರ್ ಆಫ್ ಬಿಸಿನೆಸ್ ಅಡ್ಮಿನಿಸ್ಟ್ರೇಷನ್ (ಬಿಬಿಎ/ಬಿಬಿಎಂ/ಎಂಬಿಎ) | 164 | 109 | 55 |
| 30 | ಟೂರಿಸಂ ಅಡ್ಮಿಸ್ಟ್ರೇಷನ್ | 4 | 3 | 1 |
| 31 | ಬಿಎಫ್‌ಟಿ | 3 | 0 | 3 |
| 32 | ಭೌತಶಾಸ್ತ್ರ | 375 | 342 | 33 |
| 33 | ಎಲೆಕ್ಟ್ರಾನಿಕ್ಸ್ | 31 | 26 | 5 |
| 34 | ರಸಾಯನಶಾಸ್ತ್ರ | 199 | 160 | 39 |
| 35 | ಬಯೋಕೆಮಿಸ್ಟ್ರಿ | 24 | 21 | 3 |
| 36 | ಕೈಗಾರಿಕಾ ರಸಾಯನಶಾಸ್ತ್ರ | 6 | 2 | 4 |
| 37 | ಸಸ್ಯಶಾಸ್ತ್ರ | 95 | 74 | 21 |
| 38 | ಅಪ್ಲೈಡ್ ಬಾಟನಿ | 3 | 0 | 3 |
| 39 | ಮೈಕ್ರೋಬಯಾಲಜಿ | 22 | 22 | 0 |
| 40 | ಪ್ರಾಣಿಶಾಸ್ತ್ರ | 88 | 82 | 6 |
| 41 | ಬಯೋಟೆಕ್ನಾಲಜಿ | 25 | 20 | 5 |
| 42 | ಗಣಿತಶಾಸ್ತ್ರ | 322 | 274 | 48 |
| 43 | ಸಂಖ್ಯಾಶಾಸ್ತ್ರ | 13 | 8 | 5 |
| 44 | ಗಣಕವಿಜ್ಞಾನ | 274 | 201 | 73 |
| 45 | ಭೂಗರ್ಭಶಾಸ್ತ್ರ | 5 | 1 | 4 |
| 46 | ಗೃಹವಿಜ್ಞಾನ | 51 | 35 | 16 |
| 47 | ಮಿಲಿಟರಿ ಸೈನ್ಸ್ | 2 | 0 | 2 |
| 48 | ರೇಷ್ಮೆಕೃಷಿ | 8 | 5 | 3 |
| 49 | ಪರಿಸರ ವಿಜ್ಞಾನ | 6 | 4 | 2 |
| 50 | ಮಹಿಳಾ ಅಧ್ಯಯನ | 1 | 0 | 1 |
| | ಒಟ್ಟು | 7257 | 6398 | 859 |